ಇಂದು ದಿನಾಂಕಃ 12.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಪಿ ಹೆಚ್ ಪಿ ವಕೀಲರಿಂದಃ

ವಾದಿ ನನಗೆ ತಂಗಿಯಾಗಬೇಕು. ವಾದಿ ಹೊಲದ ಸಂಬಂದ ಈ ದಾವೆಯನ್ನು ಹೂಡಿರುತ್ತಾರೆ. ನನ್ನ ತಂದೆಯ ಹೆಸರು ಮಾದೇವಪ್ಪ ಎಂದರೆ ಸರಿ. ನನ್ನ ತಂದೆಗೆ ನಾನು ಮತ್ತು ವಾದಿ ಮತ್ತು ಇಬ್ಬರೇ ಮಕ್ಕಳು ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ಮತ್ತು ವಾದಿಯ ನಡುವೆ ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಈವರೆಗೂ ಹಿಸ್ಸೆ ಆಗಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಈಗಲೂ ನನ್ನ ಮತ್ತು ವಾದಿಯ ಜಂಟಿ ಸ್ವಾದೀನದಲ್ಲಿ ಇದೆ ಎಂದರೆ ಸರಿ. ನಾನು ಸಲ್ಲಿಸಿರುವ ತಕರಾರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ.

2. ನನ್ನ ತಕರಾರಿನಲ್ಲಿ ನಮೂದಿಸಿರುವಂತೆ ನನ್ನ ಮತ್ತು ವಾದಿಯ ನಡುವೆ ದಿನಾಂಕ 04-03-1994 ರಲ್ಲಿ ವಾಟ್ನಿ ಪತ್ರ ನೋಂದು ಆಗಿರುತ್ತದೆ ಎಂದು ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸಾಕ್ಷಿಯು ವಾಟ್ನಿ ಪತ್ರ ಮಾಡಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ಮದುವೆಯಾಗಿ ಸುಮಾರು 50 ವರ್ಷಕ್ಕಿಂತ ಹೆಚು ಆಗಿರುತ್ತದೆ. ನನ್ನ ಮದುವೆಯಾದ ಸಮಯದಲ್ಲಿ ವಾದಿ ಸಣ್ಣ ವಯಸ್ಸಿನವಾಗಿದ್ದರು ಎಂದರೆ ಸರಿ. ವಾದಿ ಕೇವಲ 2 ನೇ ತರಗತಿ ಮಾತ್ರ ಓದಿರುತ್ತಾರೆ ಎಂದರೆ ಸರಿ. ವಾದಿಗೆ ಹೊರಗಿನ ಪ್ರಪಂಚದ ಜ್ಞಾನ ಇಲ್ಲದೇ ಇದಿದ್ದು ಯಾರು ಏನು ಹೇಳಿದರೂ ಕೇಳುತ್ತಾರೆ ಎಂದರೆ ಸರಿ.

3. ನಾವು 1994 ರಲ್ಲಿ ಹಿಸ್ಸೆ ಮಾಡಿಕೊಂಡ ನಂತರ ವಾದಿಗೆ ಮದುವೆ ಮಾಡಿರುತ್ತೇವೆ. ಆಕೆಯ ಮದುವೆ ಮಾಡುವ ಸಲುವಾಗಿ ನಾವು ಹಿಸ್ಸೆ ಮಾಡಿಕೊಂಡಿರುತ್ತೇವೆ. ವಾದಿ ನನಗೆ ಹಿಸ್ಸೆ ನೀಡಿ ಎಂದು ಆ ಕಾಲಕ್ಕೆ ಯಾವತ್ತೂ ಕೇಳಿರಲಿಲ್ಲ ಎಂದರೆ ಸರಿ. ಹಿಸ್ಸೆ ಮಾಡಿಕೊಳ್ಳುವ ಕಾಲಕ್ಕೆ ನಮ್ಮೂರಿನ ಪಂಚರು ಹಾಜರು ಇದಿದ್ದು ಅವರ ಹೆಸರು ಈಗ ನನಗೆ ನೆನಪಿರುವುದಿಲ್ಲ. ಆ ರೀತಿ ಹಿಸ್ಸೆ ಮಾಡಿಕೊಳ್ಳುವ ಸಮಯದಲ್ಲಿ ನಾವು ವಾದಿಗೆ ಯಾವುದೇ ಜಮೀನಿನ ಪಾಲನ್ನು ನೀಡಿರುವುದಿಲ್ಲ. ವಾದಿಯ ಮದುವೆಯ ಕಾಲಕ್ಕೆ ಹಣವನ್ನು ಮಾತ್ರ ನೀಡಿ ಮದುವೆ ಮಾಡಿಕೊಟ್ಟಿರುತ್ತೇವೆ.

4. ನನ್ನ ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ವಕೀಲರಿಗೆ ನನ್ನ ಮಗ ನೀಡಿರುತ್ತಾರೆ. ಸದರಿ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ವಾದಿಗೆ 50 ಸಾವಿರ ರೂ ಕೊಟ್ಟಿದ್ದೇವೆ ಎಂದು ಸುಳ್ಳಾಗಿ ಬರೆಸಲಾಗಿದೆ ಎಂದರೆ ಸಾಕ್ಷಿಯು ಮೌನದಿಂದ ಇರುತ್ತಾರೆ. ವಾಟ್ನಿಪ್ರಮಾಣ ಪತ್ರವನ್ನು

ನಾವು ಹಿರೇಕೆರೂರ ಕಚೇರಿಯಲ್ಲಿ ಮಾಡಿಕೊಂಡಿರುತ್ತೇವೆ. ನನ್ನ ಗಂಡ ಬಹಳ ಜಾಣ ಇದ್ದ ಎಂದರೆ ಆ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ವಾಟ್ನಿ ಪತ್ರಕ್ಕೆ ವಾದಿಯ ಖೊಟ್ಟಿಯ ಸಹಿಯನ್ನು ಮಾಡಿಕೊಂಡು ನಾನು ಮತ್ತು ನನ್ನ ಗಂಡ ಹಾಗೂ ನಮ್ಮ ಊರಿನವರು ಸೇರಿ ವಾಟ್ನಿ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ರೀತಿ ಈವರೆಗೂ ವಾದಿಗೆ ನಮ್ಮ ತಂದೆಯ ಆಸ್ತಿಯಲ್ಲಿ ಹಿಸ್ಸೆ ಆಗಿಲ್ಲ ಎಂದರೆ ಸರಿ. ನನ್ನ ತಂಗಿ ಮದುವೆಯಾದ ನಂತರ ಹಿಸ್ಸೆ ಕೋರಿ ಮುಂದೆ ಬರಬಹುದು ಎಂದು ಹೇಳಿ ನಾನು ಮತ್ತು ನನ್ನ ಗಂಡ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ಮತ್ತು ವಾದಿಗೆ ಸಮನವಾದ ಹಕ್ಕು ಇದೆ ಎಂದರೆ ಸರಿ. ಸದರಿ ವಿಚಾರಗಳೆಲ್ಲವೂ ನಮಗೆ ಗೊತ್ತಿದ್ದರೂ ಸಹ ನಾನು ಮತ್ತು ನನ್ನ ಮಗ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಹೌದು ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ.

5. ದಾವಾ ಶೆಡ್ಯೂಲ್ ಎ-4 ನೇ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಾವು ಸದರಿ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಜಮೀನನ್ನು ಮಾರಾಟ ಮಾಡಲು ನಮ್ಮ ಕುಟುಂಬಕ್ಕೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಕ್ಕಳ ಮದುವೆಯ ಸಲುವಾಗಿ ಸದರಿ ಜಮೀನನ್ನು ಮಾರಾಟ ಮಾಡಿರುತ್ತೇನೆ. ಸದರಿ ಜಮೀನನ್ನು ಮಾರಾಟ ಮಾಡಲು ವಾದಿಯ ಒಪ್ಪಿಗೆ ಇರಲಿಲ್ಲ ಎಂದರೆ ಸರಿ. ಸದರಿ ಆಸ್ತಿಯಲ್ಲಿಯೂ ಕೂಡ ವಾದಿಗೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಮೌನದಿಂದ ಇರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.